

**ಮಾದರಿಯ ಪ್ರದರ್ಶನ ಏರ್ಪಡಿಸಿದ್ದಿರಿ. ಅದನ್ನು ವಿವರಿಸಬಹುದೇ?**

ಹೌದು. ಹಿರಿಯ ಗಾಯಕ ಟಿ.ಎಂ. ಕೃಷ್ಣ ಅವರು ಕಟ್ಟೈಕೂತ್ತು ಬಗ್ಗೆ ಆಸಕ್ತಿ ತೋರಿದ್ದರು. ಮುಂಬೈಯ ಸೇಂಟ್ ಆಂಡ್ರಿವ್ ಸಭಾಂಗಣದಲ್ಲಿ 'ಫಸ್ಟ್ ಎಡಿಷನ್ ಆರ್ಟ್ಸ್ ಕರ್ನಾಟಿಕ್ ಮಾಡರ್ನ್ಸ್' ಸರಣಿಯಲ್ಲಿ ನಾನು, ಹನ್ನೆ ಎಂ. ಡಿ ಬ್ರೂನ್ ಮತ್ತು ಟಿ.ಎಂ. ಕೃಷ್ಣ, ಮತ್ತೋರ್ವ ಸಂಗೀತ ತಜ್ಞರಾದ ಸಂಗೀತಾ ಶಿವಕುಮಾರ್ ವಿಭಿನ್ನ ಪ್ರದರ್ಶನವನ್ನು ಆಯೋಜಿಸಿದ್ದೆವು. 'ದ್ರೌಪದಿ ವಸ್ತ್ರಾಪಹರಣ' ಎಂಬ ಕಥಾಭಾಗವನ್ನು ಆಯ್ದುಕೊಂಡಿದ್ದೆವು. ನಾನು ಮತ್ತು ಟಿ.ಎಂ. ಕೃಷ್ಣ ಹಾಡುಗಳನ್ನು ಪ್ರಸ್ತುತಪಡಿಸಿದೆವು. ನಾನು ಕಟ್ಟೈಗೆ ಸಂಬಂಧಿಸಿದ ಹಾಡುಗಳನ್ನು ಹಾಡುತ್ತಾ ಹೋದೆ. ಅವರು ಭಾಗವತ, ಕನಕದಾಸರ ಹಾಡುಗಳು, ಪೆರುಮಾಳ್ ಮುರುಗನ್ ಬರೆದ ಹಾಡುಗಳನ್ನು ಹಾಡುತ್ತಾ ಹೋದರು. ಶ್ರಮದ ಮಹತ್ವ, ಜ್ಞಾನದ ಆಯಾಮಗಳು ಮತ್ತು ಜಾತಿಯ ವರಸೆಗಳು ಈ ಪ್ರದರ್ಶನದ ಕೇಂದ್ರಬಿಂದುವಾಗಿದ್ದವು. ನಂತರ ದೇಶದ ವಿವಿಧೆಡೆಗಳಲ್ಲಿ ಇಂತಹ ಅನೇಕ ಪ್ರದರ್ಶನಗಳು ನಡೆದವು.

◆ **ನೀವು ಪುರಾಣವನ್ನು ಹೊರತುಪಡಿಸಿದ ಹೊಸ ಕಥೆಗಳನ್ನೂ ಬರೆದಿರುವಿರಾ?**

ಹೌದು, ಬರೆದಿರುವೆ. ನಾವೊಮ್ಮೆ ಪುದುಚೆರಿಯಿಂದ ಕಾಂಚಿಪುರಂಗೆ ಹೋಗುವ ದಾರಿಯಲ್ಲಿ ಅಧಿಕಾರಿಯೊಬ್ಬರು ಭೇಟಿಯಾಗಿ, ಒಂದು ಪ್ರದರ್ಶನವನ್ನು ಆಯೋಜಿಸುವಂತೆ ಕೋರಿದರು. ಇದೇ ಸಂದರ್ಭದಲ್ಲಿ ಅವರು, ದೇವರು ಮತ್ತು ಪುರಾಣಗಳನ್ನು ಹೊರತುಪಡಿಸಿ, ಸಾಮಾಜಿಕ ಸಮಸ್ಯೆಗಳನ್ನು ವಿವರಿಸುವ ಕಥೆಗಳನ್ನು ನೀವು ಪ್ರಸ್ತುತಪಡಿಸಬಹುದೇ ಎಂದು ಪ್ರಶ್ನಿಸಿದರು. ಆಗ ನಾನು ಹೊಸ ಕಥೆಗಳ ಬಗ್ಗೆ ಯೋಚಿಸಲಾರಂಭಿಸಿದೆ. ನನ್ನ ಪ್ರವಾಸ ಮುಗಿಯುವಷ್ಟರಲ್ಲಿ, 'ಮಾತನಾಡುವ ಮರಗಳು' ಎಂಬ ಕಥೆಯೊಂದನ್ನು ಹೆಣೆದೆ. ಕಲಾವಿದನಾದ ನಾನು ಅಂದೇ ಲೇಖಕನಾದೆ ಎನ್ನಬಹುದು. ನಂತರ ಇಂತಹ ಅನೇಕ ಕಥೆಗಳನ್ನು ಬರೆದು, ಪ್ರದರ್ಶನ ಏರ್ಪಡಿಸಿದ್ದೇನೆ.

●